ಸಿರ್ಸಿ-ಅಂಕೋಲ-ಯಲ್ಲಾಪುರ ತಾಲ್ಲೂಕಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವುದು.

2296(2681) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :— ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1999-2000, 2000-2001 ರಲ್ಲಿ ರಾಜ್ಯದಲ್ಲಿ ಪ್ರವಾಸೋದ್ಯಮ ಇಲಾಖೆಯು ಕೈಗೊಂಡ ಕಾಮಗಾರಿಗಳು ಯಾವುವು? ಮತ್ತು ಎಲ್ಲೆಲ್ಲಿ? ಮಾಹಿತಿ ನೀಡುವುದು)

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮ ದೃಷ್ಟಿಯಿಂದ ಸರ್ಕಾರದ ಯೋಜನೆಗಳೇನು? (ಮಾಹಿತಿ ನೀಡುವುದು)

ಇ) ಸಿರ್ಸಿ-ಅಂಕೋಲಾ-ಯಲ್ಲಾಪುರ ತಾಲ್ಲೂಕಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಅನೇಕ ಸ್ಥಳಗಳು ಇದ್ದರೂ ಸರ್ಕಾರ ಇದರ ಬಗ್ಗೆ ಇನ್ನೂ ಯಾವುದೇ ತೀರ್ಮಾನ ತೆಗೆದುಕೊಳ್ಳದೇ ಇರಲು ಕಾರಣವೇನು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :—

ಅ) ಅನುಬಂಧ 1ರಲ್ಲಿ ಪಟ್ಟಿ ಲಗತ್ತಿಸಲಾಗಿದೆ.

List enclosed in Annexure -1

ಆ) ಅನುಬಂಧ 2ರಲ್ಲಿ ಪಟ್ಟಿ ಲಗತ್ತಿಸಲಾಗಿದೆ.

List enclosed in Annexure -2

ಇ) 1. ಸಿರ್ಸಿಯಲ್ಲಿ ಯಾತ್ರಿ ನಿವಾಸ ನಿರ್ಮಾಣ ಯೋಜನೆ ಮಂಜೂರಾಗಿದ್ದು, ಇದಕ್ಕೆ ಅಗತ್ಯವಾದ ಸೂಕ್ತ ನಿವೇಶನವನ್ನು ಲೋಕೋಪಯೋಗಿ ಇಲಾಖೆಯಿಂದ ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸಬೇಕಾಗಿದೆ.

2. ಯಾಣ ಕೂಡ ರಸ್ತೆ ಅಭಿವೃದ್ಧಿಗೆ ಪ್ರವಾಸೋದ್ಯಮ ಇಲಾಖೆ 1996-97ನೇ ಸಾಲಿನಲ್ಲಿ ರೂ. 10.00 ಲಕ್ಷಗಳನ್ನು ಹಾಗೂ 1998-99ನೇ ಸಾಲಿನಲ್ಲಿ ರೂ. 5.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

3. ಮಾಗೋಡು ಜಲಪಾತದಲ್ಲಿ ಪ್ರವಾಸಿ ಸೌಲಭ್ಯವನ್ನು ಯೋಜನೆಗೆ ಕೇಂದ್ರದ ಮಂಜೂರಾತಿ ದೊರಕಿದೆ. ಸೂಕ್ತ ನಿವೇಶನ ಗುರುತಿಸಿದ್ದು ಇದನ್ನು ಲೋಕೋಪಯೋಗಿ ಇಲಾಖೆಯಿಂದ ಪಡೆಯಲಾಗುತ್ತಿದೆ.

4. ಗೋಕರ್ಣದಲ್ಲಿ ಯಾತ್ರಿ ನಿವಾಸ ನಿರ್ಮಿಸುವ ಯೋಜನೆಗೆ ಕೇಂದ್ರದ ಮಂಜೂರಾತಿ ದೊರಕಿದೆ. ಸೂಕ್ತ ನಿವೇಶನ ಗುರುತಿಸಿದ್ದು ಇದನ್ನು ಲೋಕೋಪಯೋಗಿ ಇಲಾಖೆಯಿಂದ ಪಡೆಯಲಾಗುತ್ತಿದೆ.

ಗೋಕರ್ಣದಲ್ಲಿ ಒಂದು ಶೌಚಾಲಯವನ್ನು ನಿರ್ಮಿಸಲಾಗಿದೆ.

ಗೋಕರ್ಣದಲ್ಲಿ ಮೀನುಗಾರಿಕೆ ಇಲಾಖೆಗೆ ಸೇರಿದ ಅತಿಥಿ ಗೃಹಗಳನ್ನು ಜಂಗಲ್ ಲಾಡ್ಜ್ಸ್ ಅಂಡ್ ರೆಸಾರ್ಟ್ಸ್ ಸಂಸ್ಥೆವಹಿಸಿಕೊಂಡಿದೆ. ಇದನ್ನು ನವೀಕರಿಸಿ ಪ್ರವಾಸಿ ಸೌಲಭ್ಯವನ್ನು ಆರಂಭಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಬನವಾಸಿಯಲ್ಲಿ ಕೇಂದ್ರ ಸರ್ಕಾರದ ನೆರವಿನಿಂದ 1993-94ನೇ ಸಾಲಿನಲ್ಲಿ ರೂ. 10.00 ಲಕ್ಷ ವೆಚ್ಚದಲ್ಲಿ ಪ್ರವಾಸಿ ಸೌಲಭ್ಯವನ್ನು ನಿರ್ಮಿಸಲಾಗಿದೆ. ಸದರಿ ಸೌಲಭ್ಯವನ್ನು ಭಾರತೀಯ ಪುರಾತತ್ವ ಇಲಾಖೆ ಇವರಿಗೆ ದೀರ್ಘಾವಧಿಯಲ್ಲಿ ಲೀಸ್ ಆಧಾರದ ಮೇಲೆ ವಹಿಸಿಕೊಂಡು ಕ್ರಮ ಕೈಗೊಳ್ಳಲಾಗುತ್ತಿದೆ.

ಬನವಾಸಿಯಲ್ಲಿ ಕೇಂದ್ರ ಸರ್ಕಾರದ ನೆರವಿನಿಂದ 1993-94ನೇ ಸಾಲಿನಲ್ಲಿ ರೂ. 10.00 ಲಕ್ಷ ವೆಚ್ಚದಲ್ಲಿ ಪ್ರವಾಸಿ ಸೌಲಭ್ಯವನ್ನು ನಿರ್ಮಿಸಲಾಗಿದೆ. ಸದರಿ ಸೌಲಭ್ಯವನ್ನು ಭಾರತೀಯ ಪುರಾತತ್ವ ಇಲಾಖೆ ಇವರಿಗೆ ದೀರ್ಘಾವಧಿಯಲ್ಲಿ ಲೀಸ್ ಆಧಾರದ ಮೇಲೆ ವಹಿಸಿಕೊಡಲು ಕ್ರಮ ಕೈಗೊಳ್ಳಲಾಗುತ್ತಿದೆ.

The following Tourism Projects have ben taken up in the State During 1999-2000 and 2000-01 (Q.No.2681)

1999-2000

1. Tourist Home at Pajaka Kshetra, Udupi District.
2. Tourist Home at Hanumanthanagar (Towards balance cost of project)
3. Yatriniwas at Sagar, Shimoga District.
4. Yatriniwas at, Sirsi
5. Tourist Receiption Centre at Gulbarga
6. Wayside Amenities at Gadag, Lukkundi
7. Wayside Amenities at Kudligi, (Dharwad District)
8. Wayside Amenities at Bankapur Cross (Dharwad Dis rict)
9. Wayside Amenities at Balki Cross (Dharwad District)
10. Wayside facility at Bannerghatta National Park, Bangalore
11. New Tourist Cottages at Muthyalamadu

12. Additioal Tourist Cottages at Srirangapatna
13. Additional Accomadation facilities at Nandi Hills
14. Arasikere-Honnavar Road, Midway to Jog
15. Shivanasamudra (Near Darga)
16. Sri.Ramadevarakatte
17. Mallekammanahalli near Bandipur
18. Ganigapur (Near Temple, Gulbarga District)
19. Hampi (4 Nos.)
20. Tumkur - Honnavar Road
21. Badami (Near caves)
22. Srirangapatna (Near Gumbaz)
23. Horanadu (near Kalasa)
24. Pilikula Nisarga Dhama Near Mangalore (2 Nos.)
25. Jungle Lodges Tourist Resorts, Hampi
26. Construction of Jetty of Sankey Boat Club, Bangalore
27. Purchase of O.B.N. for Boating at Mysore, Bangalore and K.R. Sagar (Brindavan Garden) (KSTDC Proposal)
28. Purchase of Water Sports Equipment.

    1. Devbagh Beach Resorts, Karwar (2) Kabini River Lodge, Kharapur (3) Kali Wilderness Camp, Dandeli (J.L.R. Proposal)
29. Construction of Yatriniwas at Sidda Swamy Mutt,Hubli
30. Construction of Upmarket Eco-Tourism Resort at Bannerghatta National Park, near Bangalore.
31. Construction of Construction of Students Nature Camp facilities at Bannerghatta National Park, Near Bangalore
32. Construction of log huts at the Cauvery Fishing Camp Unit - II at Dodda Makali, Mandya District

33. Construction of Eco-Tourism facility at Kemmangundi. Chickmagalur District.
34. Illumination of Srirangapatna Monuments.
35. Floodlighting Chitradurga Fort.

ASSISTANCE FOR PROMOTION OF FAIRS

36. Mysore Dasara festival
37. Hampi festival
38. Hoysala festival
39. Pattadakal festival
40. Karavali festival
41. Integrated Development of Hampi project
42. Integrated Development of Jog Area.

2000-2001

1. Construction of Public Conveniences and Drinking water facilities at Karwar Beaches
2. Gokarna, Kumta Taluk
3. Kondajji, Davangere District
4. Golgumbaz and Ibrahim Roza in Bijapur
5. Bidar near Nanak Jhara
6. Banavasi, U.K. District
7. Basavana Bagewadi, Bijapur District. (2 Nos.)
8. Development of Karanji Tank Bird Sanctuary, Mysore
9. Construction of Yatriniwas at Biligiri Rangana Hills, Mysore
10. Construction of Yatriniwas at Talakadu, Mysore District
11. Providing Musical Fountains and boating facility at Gulbarga
12. Construction of Tourist Receiption Centre at Mandya

13. Construction of Yatriniwas at Datta Peet, Ganigapur, Gulbarga
14. Construction of Yatriniwas at Mallaiah Temple, Manasuli Village, Athani, Belgaum
15. Establishment pf Ayurvedic Treatment and Rejuvenation Theraphy Centre at Pilikula Nisargashama, Mangalore
16. Construction of Restaurant/Cafeteria at Fort, Chitradurga
17. Providing floodlights to Maravanthe Beach, Udupi District
18. Providing floodlights to Malpe Beach, Udupi District
19. Construction of Yatriniwas at Darga Complex, Muragh Mulla, Chintamani Taluk, Kolar District.

ಪ್ರಶ್ನೆ ಸಂಖ್ಯೆ 2681

1) 1994-95 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಕಾರವಾರದಲ್ಲಿ ಪ್ರವಾಸಿ ಸಂಕೀರ್ಣವನ್ನು ನಿರ್ಮಿಸುವ ಸಲುವಾಗಿ ರೂ. 78.10 ಲಕ್ಷಗಳನ್ನು ಯೋಜನೆಗೆ ಅನುಮೋದನೆ ನೀಡಿ ರೂ. 26.60 ಲಕ್ಷಗಳನ್ನು ಮಂಜೂರು ಮಾಡಿದೆ. ಯೋಜನೆ ಕೆಲಸ ಕೆ.ಎಲ್.ಎ.ಸಿ. ಸಂಸ್ಥೆಗೆ ನೀಡಲಾಗಿದ್ದು, ಮುಕ್ತಾಯ ಹಂತದಲ್ಲಿದೆ.

2) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ 1996-97ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಹೆಚ್ಚುವರಿ ವಸತಿ ಮತ್ತು ಉಪಹಾರ ಗೃಹದ ರೂ. 27.12 ಲಕ್ಷಗಳ ಯೋಜನೆಗೆ ಮಂಜೂರಾತಿ ನೀಡಿದ್ದು, ಈ ಯೋಜನೆ ಕಾರ್ಯವು ಜನವರಿ 1999ರಲ್ಲಿ ಪೂರ್ಣಗೊಂಡಿದೆ. ಈ ಸೌಲಭ್ಯವನ್ನು ಮೆ: ಅರಣ್ಯ ವಸತಿ ಮತ್ತು ವಿಹಾರಧಾಮ ಸಂಸ್ಥೆಗೆ ವಹಿಸಲಾಗಿದ್ದು, ಪ್ರವಾಸಿಗರಿಗೆ ತೆರೆಯಲಾಗಿದೆ.

3) ಕಾರವಾರ ಕಡಲತೀರದಲ್ಲಿ ಉದ್ಯಾನವನ, ಲ್ಯಾಂಡ್ ಸ್ಕೇಪಿಂಗ್, ನೀರಿನ ತೊಟ್ಟಿ ನಿರ್ಮಿಸಲು ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಾರವಾರದವರಿಗೆ 1994-95ನೇ ಸಾಲಿನಲ್ಲಿ ರೂ. 11.00 ಲಕ್ಷಗಳನ್ನು ಒದಗಿಸಲಾಗಿದೆ.

4) ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಅತ್ತಿವೇರಿ ಪಕ್ಷಿಧಾಮ ಅಭಿವೃದ್ಧಿಗಾಗಿ 1996-97ನೇ ಸಾಲಿನಲ್ಲಿ ರೂ. 5.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಕಾರವಾರದವರಿಗೆ ಬಿಡುಗಡೆ ಮಾಡಲಾಗಿದೆ.

5) ಯಲ್ಲಾಪುರ ತಾಲ್ಲೂಕಿನ ಮಾಗೋಡಿನಲ್ಲಿರುವ ಇಲಾಖೆಯ ಪ್ರವಾಸಿ ಗೃಹವನ್ನು 20 ವರ್ಷಗಳ ಅವಧಿಗೆ ಅರಣ್ಯ ಉಪಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ, ಯಲ್ಲಾಪುರ ವಿಭಾಗರವರಿಗೆ ದಿನಾಂಕ:1 9-9-83 ರಂದು ವಹಿಸಿಕೊಡಲಾಗಿದೆ.

6. ಬೆಳಗಾಂ-ಗೋವಾ ರಸ್ತೆ ಮಧ್ಯದಲ್ಲಿರುವ ಅನುಮೋಡ್ ಹೆದ್ದಾರಿ ಸೌಲಭ್ಯವನ್ನು ರೂ. 14.85 ಲಕ್ಷಗಳಿಗೆ ನಿರ್ಮಿಸಿ ಪ್ರವಾಸಿಗರ ಅನುಕೂಲಕ್ಕಾಗಿ ಖಾಸಗಿಯವರಿಗೆ ನಿರ್ವಹಣೆಗಾಗಿ ಲೀಸ್-ಕಂ-ಲೈಸನ್ಸ್ ಆಧಾರದ ಮೇಲೆ ವಹಿಸಿಕೊಡಲಾಗಿದೆ.

7. ಸೂಪ ತಾಲ್ಲೂಕು ರಾಮನಗರದ ಬಳಿ ರೂ.1,35,700.00 ವೆಚ್ಚದಲ್ಲಿ ಹೆದ್ದಾರಿ ಸೌಲಭ್ಯವನ್ನು ನಿರ್ಮಿಸಿ ಖಾಸಗೀಕರಣಗೊಳಿಸಲಾಗಿದೆ.

8. ಪ್ರವಾಸಿಗರ ಅನುಕೂಲಕ್ಕಾಗಿ ಕಾರವಾರದಲ್ಲಿ ಪ್ರಾದೇಶಿಕ ಪ್ರವಾಸಿ ಕಛೇರಿಯನ್ನು ತೆರೆಯಲಾಗಿದೆ.

ಕೈಗಾ ಘಟಕಕ್ಕೆ ಲೈನ್ ಮಾರ್ಗ ಹೋಗಲು ಅರಣ್ಯ ಪ್ರದೇಶ ನಾಶವಾಗುವ ಬಗ್ಗೆ.

2297(2730) ಶ್ರೀ ವಿಶ್ವೇಶ್ವರ ಹೆಗಡೆ ಹಾಗೇರಿ (ಅಂಕೋಲಾ) :— ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೈಗಾ1 ಮತ್ತು 2ನೇ ಘಟಕ ಲೈನ್ ಮಾರ್ಗ ಹೋಗಲು ಅರಣ್ಯ ಎಷ್ಟು ನಾಶವಾಗಿದೆ; ಎಲ್ಲೆಲ್ಲಿ?

ಆ) ಕೈಗಾ 3ನೇ ಮತ್ತು 4ನೇ ಘಟಕಕ್ಕೆ ಲೈನ್ ಮಾರ್ಗ ಹೋಗಲು ಯಾವ ಯಾವ ಅರಣ್ಯ ಪ್ರದೇಶ ಸಮೀಕ್ಷೆ ಆಗಿದೆ;

ಇ) ಇದರಿಂದ ನಾಶವಾಗುವ ಅರಣ್ಯ ಪ್ರದೇಶ ಎಷ್ಟು?

ಈ) ಅರಣ್ಯ ನಾಶವಾಗದೇ ಬೇರೆ ಮಾರ್ಗದಲ್ಲಿ ಲೈನ್ ಮಾರ್ಗ ಸಾಗಲು ತೊಂದರೆಯೇನು?

ಉ) ಸರ್ಕಾರ ಇದರ ಬಗ್ಗೆ ಆಲೋಚನೆ ಮಾಡಿದೆಯೇ ಹೇಗೆ?

ಶ್ರೀ ಕೆ.ಎಚ್. ರಂಗನಾಥ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

ಅ) 727.074 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಬಿಡುಗಡೆ ಮಾಡಲಾಗಿದೆ. ಈ ಅರಣ್ಯ ಪ್ರದೇಶಗಳನ್ನು ಕಾರವಾರ, ಯಲ್ಲಾಪುರ, ಸಿರ್ಸಿ, ಸಾಗರ ಅರಣ್ಯ ವಿಭಾಗಗಳಲ್ಲಿ ಬಿಡುಗಡೆ ಮಾಡಲಾಗಿದೆ.